

## ದೀಪಿಕಾ ಎಕ್ಸ್‌ಪ್ರೆಸ್!

ಬಿ-ಟೌನಿನಲ್ಲಿ ದಿನವೂ ಸುದ್ದಿಯಲ್ಲಿರುವ ಕನ್ನಡತಿ ದೀಪಿಕಾ ಪಡುಕೋಣೆ ಮೇಲೆ ಈಗ ಸಿನಿ ಪ್ರಿಯರ ಕಣ್ಣು ನೆಟ್ಟಿದೆ. ಸುರಿಯುವ ಮಳೆಯ ನಡುವೆಯೂ 'ಚೆನ್ನೈ ಎಕ್ಸ್‌ಪ್ರೆಸ್' ಕಾವು ತೀವ್ರಗೊಂಡಿದೆ. ಅದೃಷ್ಟದ ನಟಿ ದೀಪಿಕಾ ಯಶಸ್ಸಿನ ಯಾನ ಇಲ್ಲೂ ಮುಂದುವರಿಯಬಹುದು ಎಂಬ ನಿರೀಕ್ಷೆಯಿದೆ. ರಣಬೀರ್ ಕಪೂರ್ ಮತ್ತು ಕತ್ರೀನಾ ಪ್ರೀತಿ ಜಗಜ್ಜಾಹೀರಾಗಿದ್ದರೂ ರಣಬೀರ್ ಮೇಲಿನ ದೀಪಿಕಾ ಪ್ರೀತಿ ಕಡಿಮೆಯಾಗಿಲ್ಲವೆಂಬ ಗುಸು ಗುಸು ಇನ್ನೂ ಮರೆಯಾಗಿಲ್ಲ. ಇದಕ್ಕೆ ಒಂದರ ಹಿಂದೊಂದು ಸಿನಿಮಾಗಳಲ್ಲಿ ರಣಬೀರ್ ಮತ್ತು ದೀಪಿಕಾ ಜೋಡಿಯಾಗಿ ನಟಿಸುತ್ತಿರುವುದೂ ಒಂದು ಕಾರಣ.

'ಯೇ ಜವಾನಿ ಹೇ ದೀವಾನಿ'ಯ ಭರ್ಜರಿ ಯಶಸ್ಸಿನ ಬಳಿಕ ಈ ಮಾಜಿ ಪ್ರೇಮಿಗಳು ಮತ್ತೊಂದು ಚಿತ್ರದಲ್ಲಿ ಜೊತೆಯಾಗಿ ನಟಿಸುತ್ತಿದ್ದಾರೆ ಎಂಬ ಮಾತು ಬಾಲಿವುಡ್ ಅಂಗಳದಲ್ಲಿ ಹರಿದಾಡುತ್ತಿತ್ತು. ಆ ಸುದ್ದಿಯೀಗ ದೃಢಪಟ್ಟಿದೆ. ಇಮ್ತಿಯಾಜ್ ಅಲಿ ನಿರ್ದೇಶನದ ಚಿತ್ರದಲ್ಲಿ ಇವರಿಬ್ಬರು ಮತ್ತೆ ತೆರೆ ಹಂಚಿಕೊಳ್ಳಲಿದ್ದಾರಂತೆ. ಅಲಿಯಾ ಭಟ್ ಅಥವಾ ಕತ್ರೀನಾ ಕೈಫ್ ಈ ಚಿತ್ರದಲ್ಲಿ ರಣಬೀರ್‌ಗೆ ಜೋಡಿಯಾಗಲಿದ್ದಾರೆ ಎನ್ನಲಾಗುತ್ತಿತ್ತು. ಆದರೆ ಇಮ್ತಿಯಾಜ್‌ಗೆ 'ಯೇ ಜವಾನಿ...' ಗೆಲುವಿನ ಬಳಿಕ 'ಡಿಪ್ಸ್' ಈ ಪಾತ್ರಕ್ಕೆ ಸೂಕ್ತ ನಟಿ ಎನಿಸಿದ್ದಾರಂತೆ. ನಾಯಕಿಯ ಕುರಿತು ಚರ್ಚಿಸುವಾಗ ಇಮ್ತಿಯಾಜ್‌ಗೆ ಸ್ವತಃ ರಣಬೀರ್, ದೀಪಿಕಾ ಹೆಸರನ್ನು ಸೂಚಿಸಿದರಂತೆ. ಈ ಚಿತ್ರದಲ್ಲಿ ಕತ್ರೀನಾ ಅತಿಥಿ ಪಾತ್ರದಲ್ಲಿ ಕಾಣಿಸಿಕೊಳ್ಳುವ ಸಾಧ್ಯತೆಯೂ ಇದೆಯಂತೆ. ಬಾಲಿವುಡ್ ಪಂಡಿತರು ಇದನ್ನು, ಅಮಿತಾಬ್ ಬಚ್ಚನ್, ಜಯಾ ಮತ್ತು ರೇಖಾ ಒಂದೇ ಚಿತ್ರದಲ್ಲಿ (ಸಿಲ್‌ಸಿಲಾ) ನಟಿಸಿದ ಗಳಿಗೆಗೆ ಹೋಲಿಸುತ್ತಿದ್ದಾರೆ.



## ಧನುಶ್ ಹಿಂದಿ ಅ, ಆ, ಇ, ಈ...

'ರಾಂಝಾಣಾ' ಸಿನಿಮಾ ರಜನಿಕಾಂತ್ ಅಳಿಯನ ಹಣೆಬರಹವನ್ನೇ ಬದಲಿಸಿದೆ. 'ಕೊಲವೆರಿ ಡಿ' ಹಾಡಿನ ಮೂಲಕ ದೇಶದಾಚೆಗೂ ಜನಪ್ರಿಯತೆ ಗಳಿಸಿದ ಧನುಶ್ ಈಗ ಕಾಲಿವುಡ್‌ನಿಂದ ಹೊರಬಂದು ಸಂಪೂರ್ಣವಾಗಿ ಬಾಲಿವುಡ್‌ನಲ್ಲಿ ನೆಲೆಯೂರುವ ಸೂಚನೆ ನೀಡಿದ್ದಾರೆ. 'ರಾಂಝಾಣಾ' ಚಿತ್ರಕ್ಕೆ ನಿರೀಕ್ಷೆಗೂ ಮೀರಿ ದೊರೆತ ಪ್ರತಿಕ್ರಿಯೆ ಅವರನ್ನು ಬೆರಗುಗೊಳಿಸಿದೆ. ಈ ನೆಪದಲ್ಲಿ ಅವರ ಮನೆಮುಂದೆ ನಿಲ್ಲುವ ಬಾಲಿವುಡ್ ನಿರ್ಮಾಪಕರ ಸಂಖ್ಯೆಯಲ್ಲೂ ಏರಿಕೆಯಾಗಿದೆ.

ತಮಿಳಿಗ ಧನುಶ್‌ಗೆ ಹಿಂದಿ ಭಾಷೆಯ ನಂಟು ಅಷ್ಟಕಷ್ಟೆ. ಆದರೆ ಬಾಲಿವುಡ್‌ನಲ್ಲಿ ನೆಲೆಯೂರಲು ಹಿಂದಿ ಅನಿವಾರ್ಯ. ಈ ಕಾರಣಕ್ಕಾಗಿ ಧನುಶ್ ಹಿಂದಿ ಕಲಿಯುವ ಸಾಹಸಕ್ಕೆ ಕೈ ಹಾಕಿದ್ದಾರೆ. ಈ ವಯಸ್ಸಿನಲ್ಲಿ ಹೊಸ ಭಾಷೆ ಕಲಿಯುವುದು ಸುಲಭವಲ್ಲ. ಹಿಂದಿ ಕಲಿಯುವ ಸಲುವಾಗಿ ಗುರುಗಳೊಬ್ಬರನ್ನು ಧನುಶ್ ಹುಡುಕಿಕೊಂಡಿದ್ದಾರೆ. 'ಸ್ಪಷ್ಟ ಹಿಂದಿ ಕಲಿಯುವ ಹಟ ಮಾಡಿದ್ದೇನೆ. ಆದರೆ ಇದರರ್ಥ ನಾನು ಕೇವಲ ಹಿಂದಿ ಚಿತ್ರಗಳಲ್ಲಿ ನಟಿಸುತ್ತೇನೆ ಎಂದಲ್ಲ' ಎನ್ನುವ ಧನುಶ್, 'ನನ್ನ ಮುಖ್ಯ ನೆಲೆಯೇನಿದ್ದರೂ ತಮಿಳು ಚಿತ್ರರಂಗ ಮಾತ್ರ. ಏಕೆಂದರೆ ತಮಿಳು ನನ್ನ ಮಾತೃಭಾಷೆ. ಆಗಾಗ್ಗೆ ಹಿಂದಿ ಚಿತ್ರಗಳಲ್ಲಿ ಕಾಣಿಸಿಕೊಳ್ಳುತ್ತೇನೆ' ಎಂದು ಸ್ಪಷ್ಟನೆ ನೀಡಿದ್ದಾರೆ.

## ಅಪ್ಪುಗೆ ಪ್ರಸಂಗದ ಸುತ್ತ...



ಬಾಲಿವುಡ್‌ನ (ಕು) ಖ್ಯಾತ ಬದ್ಧವೈರಿ ಜೋಡಿಗಳಲ್ಲೊಂದಾದ ಶಾರೂಕ್ ಖಾನ್ ಮತ್ತು ಸಲ್ಮಾನ್ ಖಾನ್ ಜೋಡಿಯ 'ಅಪ್ಪುಗೆ ಪ್ರಸಂಗ' ಕುರಿತೇ ಈಗ ಎಲ್ಲೆಡೆ ಮಾತು. ಸದ್ಯಕ್ಕದು ರಾಷ್ಟ್ರೀಯ ಸುದ್ದಿ. ಖಾನ್ ತ್ರಯರು ಒಬ್ಬರ ಮುಖವನ್ನೊಬ್ಬರು ಕಂಡರೆ ಆಗುವುದಿಲ್ಲ ಎಂದು ಬೆನ್ನು ತಿರುಗಿಸಿ ನಡೆಯುತ್ತಿರುವಾಗ ಖಾನ್ ದ್ವಯರು ಪರಸ್ಪರ ಆಲಂಗಿಸಿಕೊಂಡರೆ ಅದು ಸಾಮಾನ್ಯ ಸುದ್ದಿಯೇ. ಇತ್ತೀಚೆಗೆ ಬಾಬಾ ಸಿದ್ದಿಕಿ ಅವರು ಏರ್ಪಡಿಸಿದ್ದ ಇಫ್ತಾರ್ ಕೂಟದಲ್ಲಿ ಒಂದುಗೂಡಿದ ಖಾನ್‌ಗಳು ಹಸ್ತಲಾಘವ ಮಾಡಿದ್ದಲ್ಲದೆ, ಅಪ್ಪಿಕೊಂಡು ಮಾಧ್ಯಮಗಳಿಗೆ ಭರಪೂರ ಆಹಾರ ಒದಗಿಸಿದ್ದಾರೆ.

ಸಂತೋಷ ಕೂಟಕ್ಕೆ ಬಂದ ಸಲ್ಮಾನ್ ಹಾಗೆಯೇ ಚಿತ್ರೀಕರಣಕ್ಕೆಂದು ತೆರಳಿದರೆ, ಶಾರೂಕ್ ಪಾರ್ಟಿಯುದ್ದಕ್ಕೂ ಸಲ್ಮಾನ್ ತಂದೆ ಸಲೀಮ್ ಖಾನ್ ಜೊತೆಗೇ ಕುಳಿತಿದ್ದರಂತೆ. 2008ರಲ್ಲಿ ಕತ್ರೀನಾ ಕೈಫ್ ಜನ್ಮದಿನಾಚರಣೆ ಪಾರ್ಟಿಯಲ್ಲಿ ಪರಸ್ಪರ ಕಿತ್ತಾಡಿಕೊಂಡಿದ್ದ ಸಲ್ಲೂ ಮತ್ತು ಶಾರೂಕ್ ಮತ್ತೆ ಮುಖಾಮುಖಿಯಾಗಿರಲಿಲ್ಲ. ಅಪ್ಪುಗೆ ಪ್ರಸಂಗದ ಬಗ್ಗೆ ಸಾರ್ವಜನಿಕವಾಗಿ ಮಾತನಾಡುವುದು ಇಷ್ಟವಿಲ್ಲ ಎಂದಿದ್ದಾರೆ ಶಾರೂಕ್. ಅದೇ ದಿನ ಶಾರೂಕ್, 'ಪುಟ ತಿರುವಿ ಹಾಕುವುದು ಪ್ರಪಂಚದಲ್ಲಿ ಸಿಗುವ ಅತ್ಯುತ್ತಮ ಅನುಭವ ಎನ್ನುವುದು ನಿನಗೆ ಕೊನೆಗೂ ಅರಿವಾಗಿದೆ. ಏಕೆಂದರೆ ನೀನು ಅಂಟಿಕೊಂಡಿರುವ ಪುಟಕ್ಕಿಂತಲೂ ಪುಸ್ತಕದಲ್ಲಿ ಸಾಕಷ್ಟಿದೆ' ಎಂದು ಟ್ವೀಟ್ ಮಾಡಿದ್ದಾರೆ.

■ ಅಮಿ